**ಇಂದು ದಿನಾಂಕ 09.12.2025 ರಂದು ಪಿಡಬ್ಲ್ಯೂ -1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ**

**1.** ದಾವಾ ಸರ್ವೆ ನಂ.97. ಸರ್ವೆ ನಂ.97 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ಗೊತ್ತಿಲ್ಲ. ದಾವೆಯಲ್ಲಿ ಇನ್ನು ಯಾವ ಸರ್ವೆ ನಂಬರ್‌ಗಳು ಇವೆ ಎಂದು ನೆನಪಿಲ್ಲ. ಸರ್ವೆ ನಂ.97 ರ ಚೆಕ್ಕುಬಂದಿಯನ್ನು ಹೇಳಲಾಗುವುದಿಲ್ಲ. ಸರ್ವೆ ನಂ.75 ರ ಚೆಕ್ಕುಬಂದಿಯನ್ನು ಹೇಳಲಾಗುವುದಿಲ್ಲ. ದಾವಾ ಆಸ್ತಿಯಲ್ಲಿ ಮುಂಚೆ ಸಣ್ಣ ಬಾವಿ ಇತ್ತು. ದಾವಾ ಆಸ್ತಿಯಲ್ಲಿ ರಾಗಿ ಬೆಳೆಯುತ್ತಿದ್ದೆವು ಈಗ ಏನು ಬೆಳೆ ಇಟ್ಟಿಲ್ಲ. ದಾವಾ ಆಸ್ತಿ ಮೊದಲು 6 ರಿಂದ 10 ನೇ ಪ್ರತಿವಾದಿಯರಿಗೆ ಸೇರಿತ್ತು ಎಂದರೆ ನಿಜ. ಅವರು ಸುಗ್ಗಟ್ಟ ಗ್ರಾಮದವರು ಎಂದರೆ ನಿಜ. 2 ರಿಂದ 5 ನೇ ಪ್ರತಿವಾದಿಯರು ಸಹ ಅದೇ ಊರಿನಲ್ಲಿ ವಾಸವಿದ್ದಾರೆ ಎಂದರೆ ನಿಜ. ಅವರು ಮತ್ತು 6 ರಿಂದ 10 ನೇ ಪ್ರತಿವಾದಿಯರು ಅಕ್ಕ-ಪಕ್ಕದ ಮನೆಗಳಲ್ಲಿ ವಾಸವಿದ್ದರು ಎಂದರೆ ನಿಜ. ನಾನು ಭೂಮಿ ವ್ಯವಹಾರ ಮಾಡುತ್ತೇನೆ. ನಾನು ಈಗ ಮಲ್ಲೇಶ್ವರಂನಲ್ಲಿ ವಾಸವಿದ್ದೇನೆ. ನಾರಾಯಣಪ್ಪನ ಮಗ ನರಸಿಂಹಯ್ಯನವರು ನನ್ನ ಕಛೇರಿಗೆ ಬರುತ್ತಿದ್ದರು ಆದ ಕಾರಣ ಸ್ನೇಹಿತರು. ಅವರು ಗಂಗಮ್ಮ ಗುಡಿ ಬೆಂಗಳೂರಿನಲ್ಲಿ ವಾಸ ಮಾಡುತ್ತಾರೆ. ಅವರು ಸುಗ್ಗಟ್ಟ ಗ್ರಾಮದಲ್ಲಿ ವಾಸವಿದ್ದರ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡುತ್ತೇವೆ ಎಂದು 2003 ರಲ್ಲಿ ವಿಜಯ್ ಕುಮಾರ್ ಮತ್ತು ನರಸಿಂಹಯ್ಯನವರು ನನ್ನ ಕಛೇರಿಗೆ ಬಂದಿದ್ದರು. ಮಾತು-ಕತೆ ನನ್ನ ಕಛೇರಿಯಲ್ಲಿ ನಡೆಯಿತು. ಒಟ್ಟು ಕ್ರಯದ ಮೊತ್ತ ರೂ.34 ಲಕ್ಷ ರೂ.4 ಲಕ್ಷವನ್ನು ಮೊದಲೇ ಕೊಟ್ಟಿದ್ದರು. ಮಾತು-ಕತೆಯಾದಾಗ ಕರಾರು ಪತ್ರವನ್ನು ಬರೆಸಿರಲಿಲ್ಲ. ಬಿಳಿ ಹಾಳೆಯಲ್ಲಿ ಬರೆದುಕೊಂಡಿದ್ದರು. ಆ ದಾಖಲೆ ಸಿಕ್ಕಿದರೆ ಹಾಜರು ಮಾಡುತ್ತೇನೆ. ಆ ದಾಖಲೆಯಲ್ಲಿ ವಿಜಯ್‌ಕುಮಾರ್ ರವರಿಗೆ ರೂ.4 ಲಕ್ಷ ಹಣವನ್ನು 2003 ರಲ್ಲಿ ಕೊಟ್ಟಿದ್ದೇವೆ ಎಂದು ನಮೂದಾಗಿದೆ. ಮುಂಗಡ ಹಣ ಕೊಟ್ಟಾಗ ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿಗಳನ್ನು ಕೊಟ್ಟಿದ್ದರು. ಬೇರೆ ದಾಖಲೆಗಳನ್ನು ಕೊಟ್ಟಿಲ್ಲ. ಪಹಣಿಯನ್ನು ವಿಜಯ್ ಕುಮಾರ್ ರವರು ಕೊಟ್ಟರು. ಮುಂಗಡ ಹಣ ಕೊಟ್ಟರೆ ಕರಾರಿನಲ್ಲಿ ಬರೆಸಿಕೊಂಡು ಕೊಡುತ್ತಾರೆ ಎಂದರೆ ನಿಜ. ರೂ.4 ಲಕ್ಷ ಹಣವನ್ನು ವಿಜಯ್ ಕುಮಾರ್ ರವರಿಗೆ ನಗದು ರೂಪದಲ್ಲಿ ಕೊಟ್ಟಿದ್ದೆನು. ನನಗೆ ಕರಾರು ಆಗುವ ಮೊದಲು ಬೇರೆ ಯಾರಿಗೆ ಕ್ರಯಪತ್ರವಾಗಿತ್ತು ಎಂದು ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನರಸಿಂಹಯ್ಯನ ಹೆಸರಿಗೆ ದಾಖಲೆ ಇರಲಿಲ್ಲ ಎಂದರೆ ಅಧಿಕಾರ ಪತ್ರವನ್ನು ಅವರ

ಹೆಸರಿಗೆ ಮಾಡಿದ್ದರು ಎನ್ನುತ್ತಾರೆ. ಆ ದಾಖಲೆಯನ್ನು ನಾನು ನೋಡಿದ್ದೇನೆ. ಜಿ.ಪಿ.ಎ. ನ್ನು ಯಾವಾಗ ಬರೆದಿದ್ದಾರೆ ಎಂದು ಗೊತ್ತಿಲ್ಲ. ಅದನು ವಿಜಯ್ ಕುಮಾರ್ ಕುಟುಂಬದವರು ಮಾಡಿಕೊಟ್ಟಿದ್ದಾರೆ. ಅದು ನೋಂದಣಿಯಾಗಿಲ್ಲ. ವಿಜಯ್ ಕುಮಾರ್ ರವರ ಕುಟುಂಬದವರನ್ನು ಬಿಟ್ಟು ಬೇರೆ ಯಾರು ಸಹಿ ಹಾಕಿದ್ದಾರೆ ಎಂದು ಗೊತ್ತಿಲ್ಲ. ಜಿ.ಪಿ.ಎ.ನ್ನು ಯಾವ ಉದ್ದೇಶಕ್ಕೆ ಅವರು ಬರೆದುಕೊಟ್ಟಿದ್ದಾರೆ ಎಂದು ಗೊತ್ತಿಲ್ಲ. ವಿಜಯ್ ಕುಮಾರ್ ರವರಿಂದ ಹಣ ಪಡೆದಿದ್ದಾರೊ ಇಲ್ಲವೊ ಗೊತ್ತಿಲ್ಲ.

(ಈ ಹಂತದಲ್ಲಿ 1 ನೇ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಕಾಲಾವಕಾಶ ನೀಡಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**